# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 98
ಮಾನ್ಯ ಸದಸ್ಯರ ಹೆಸರು : ಶ್ರೀ ಕೆ.ಹರೀಶ್ ಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 13-02-2023
ಉತ್ತರಿಸುವ ಸಚಿವರು : ಪ್ರವಾಸೋದ್ಯಮ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ತಾಲ್ಲೂಕು ಜಮಲಾಬಾದ್ ಕೋಟೆ ಚಂದ್ರೂರು ದೇವಸ್ಥಾನದ ಬಳಿ ಇರುವ ಪ್ರವಾಸೋದ್ಯಮ ಇಲಾಖೆಯ ವಸತಿ ಗೃಹ ನಿರ್ಮಾಣ ಕಾಮಗಾರಿಯು ಯಾವ ವರ್ಷದಿಂದ ಪ್ರಾರಂಭವಾಗಿದೆ; | ಈ ಕಾಮಗಾರಿಯನ್ನು ದಿನಾಂಕ: 11.06.2019 ರಂದು ಪ್ರಾರಂಭಿಸಲಾಗಿದ್ದು, ಕಟ್ಟಡದ ಒಳಭಾಗದ ಗಾರೆಕೆಲಸ ಪೂರ್ಣಗೊಂಡಿದೆ ಎಂದು ಕಾಮಗಾರಿಯ ಅನುಷ್ಠಾನ ಸಂಸ್ಥೆಯಾದ ದಕ್ಷಿಣ ಕನ್ನಡ ನಿರ್ಮಿತಿ ಕೇಂದ್ರ ರವರು ವರದಿ ಸಲ್ಲಿಸಿರುತ್ತಾರೆ.<br>ಕೋವಿಡ್-19ರ ಹಿನ್ನಲೆಯಲ್ಲಿ, ಪ್ರವಾಸೋದ್ಯಮ ಇಲಾಖೆಗೆ 2020-21 ಮತ್ತು 2021-22ನೇ ಸಾಲುಗಳಲ್ಲಿ ಬಂಡವಾಳ ವೆಚ್ಚಗಳ ಲೆಕ್ಕಶೀರ್ಷಿಕೆಯಡಿಯಲ್ಲಿ ಕ್ರಮವಾಗಿ ರೂ.35.00 ಕೋಟಿ ಹಾಗೂ ರೂ.71.00 ಕೋಟಿಗಳನ್ನು ಮಾತ್ರ ಒದಗಿಸಿದ್ದು, ಸದರಿ ಲೆಕ್ಕಶೀರ್ಷಿಕೆಯಡಿಯಲ್ಲಿ ಎರಡು ಸಾಲುಗಳಲ್ಲಿ 900ಕ್ಕೂ ಅಧಿಕ ಮುಂದುವರೆದ ಕಾಮಗಾರಿಗಳಿದ್ದು, ಈ ಪೈಕಿ ಪೂರ್ಣಗೊಂಡಿರುವ ಹಾಗೂ ಪೂರ್ಣಗೊಳ್ಳುವ ಹಂತದಲ್ಲಿರುವ ಕಾಮಗಾರಿಗಳಿಗೆ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ. ಆದುದರಿಂದ, 2020-21 ಮತ್ತು 2021-22ನೇ ಸಾಲುಗಳಲ್ಲಿ ಅನುದಾನದ ಕೊರತೆಯಿಂದ ಸದರಿ ಕಾಮಗಾರಿಗೆ ಅನುದಾನ ಬಿಡುಗಡೆ ಮಾಡಲು ಸಾಧ್ಯವಾಗಿರುವುದಿಲ್ಲ. |
| ಆ) | ಸದರಿ ವಸತಿ ಗೃಹ ಕಾಮಗಾರಿ ಯಾವ ಹಂತದಲ್ಲಿದೆ; ಕಾಮಗಾರಿಯು ಬಾಕಿ ಉಳಿಯಲು ಕಾರಣವೇನು; ಯಾವಾಗ ಪೂರ್ಣಗೊಳಿಸಲಾಗುವುದು; (ವಿಸ್ತೃತವಾದ ವರದಿಯನ್ನು ನೀಡುವುದು) | ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ತಾಲ್ಲೂಕಿನ ನಡ ಗ್ರಾಮದ ಜಮಲಾಬಾದ್ ಕೋಟೆ ಪ್ರದೇಶದಲ್ಲಿ 10 ಕೊಠಡಿಗಳ ಯಾತ್ರಿ ನಿವಾಸ ನಿರ್ಮಾಣ ಕಾಮಗಾರಿಯನ್ನು ರೂ.40.00 ಲಕ್ಷಗಳ ಅಂದಾಜು ಮೊತ್ತದಲ್ಲಿ ಕೈಗೊಳ್ಳಲು ದಿನಾಂಕ: 18-08-2015 ರಂದು ಸರ್ಕಾರದಿಂದ ಅನುಮೋದನೆ ನೀಡಲಾಗಿದೆ. ಸದರಿ ಕಾಮಗಾರಿಗೆ ಇಲಾಖೆಯಿಂದ ಮೊದಲ ಕಂತಾಗಿ ರೂ.20.00 ಲಕ್ಷಗಳನ್ನು ಬಿಡುಗಡೆಗೊಳಿಸಿದ್ದು, ಅದರನ್ವಯ ಕಾಮಗಾರಿ ಕೈಗೊಂಡಿದ್ದು, ರೂ.20.00 ಲಕ್ಷಗಳಿಗೆ ಅನುಷ್ಠಾನ ಸಂಸ್ಥೆಯವರು ಹಣಬಳಕೆ ಪ್ರಮಾಣಪತ್ರ, ಛಾಯಾಚಿತ್ರಗಳು, ಚೆಕ್ ಲಿಸ್ಟ್ ಮತ್ತು 3ನೇ ವ್ಯಕ್ತಿಯ ತಪಾಸಣಾ ವರದಿಯನ್ನು ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ, ದಕ್ಷಿಣ ಕನ್ನಡ ಜಿಲ್ಲೆರವರು ದಿನಾಂಕ: 15.11.2022 ರಲ್ಲಿ ಸಲ್ಲಿಸಿರುತ್ತಾರೆ ಹಾಗೂ ಸದರಿ ಕಾಮಗಾರಿಯ ಸಂಬಂಧ ವರದಿಯನ್ನು ಉಪನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ರವರು ದಿನಾಂಕ: 20.01.2023 ರಂದು ಸಲ್ಲಿಸಿರುತ್ತಾರೆ.<br>ಸದರಿ ಕಾಮಗಾರಿಗೆ 2022-23ನೇ ಸಾಲಿನಲ್ಲಿ ಬಾಕಿ ಅನುದಾನವನ್ನು ಬಿಡುಗಡೆ ಮಾಡಲು ಅಗತ್ಯ ಕ್ರಮ ವಹಿಸಲಾಗುವುದು. |
| ಇ) | 2018ರ ಬಳಿಕ ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ತಾಲ್ಲೂಕಿಗೆ ಪ್ರವಾಸೋದ್ಯಮ ಇಲಾಖೆಯಿಂದ ಮಂಜೂರಾದ ಕಾಮಗಾರಿಗಳು ಯಾವುವು; ಇವುಗಳು ಯಾವ-ಯಾವ ಹಂತದಲ್ಲಿದೆ? | 2018ರ ಬಳಿಕ ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ತಾಲ್ಲೂಕಿನಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ಮಂಜೂರಾದ ಕಾಮಗಾರಿಗಳ ವಿವರವನ್ನು ಅನುಬಂಧದಲ್ಲಿ ಒದಗಿಸಿದೆ. |

TOR 09 TDV 2023

(ಆನಂದ್ ಸಿಂಗ್)
ಪ್ರವಾಸೋದ್ಯಮ,
ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು

## ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 98ಕ್ಕೆ ಅನುಬಂಧ
## ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನಲ್ಲಿ ಮಂಜೂರಾದ ಕಾಮಗಾರಿಗಳ ವಿವರ

(ರೂ.ಲಕ್ಷಗಳಲ್ಲಿ)

| ಕ್ರ ಸಂ. | ಕಾಮಗಾರಿಯ ಹೆಸರು | ಮಂಜೂರಾದ ವರ್ಷ/ ಯೋಜನೆ | ಅಂದಾಜು ಮೊತ್ತ | ಅನುಷ್ಠಾನ ಸಂಸ್ಥೆ | ಈವರೆಗೂ ಬಿಡುಗಡೆ ಮಾಡಿರುವ ಅನುದಾನ | ಷರಾ |
|---|---|---|---|---|---|---|
| 1 | 2 | 3 | 4 | 5 | 6 | 7 |
| | **ದಕ್ಷಿಣ ಕನ್ನಡ ಜಿಲ್ಲೆ** | | | | | |
| | **ಬೆಳ್ತಂಗಡಿ ತಾಲ್ಲೂಕು** | | | | | |
| 1 | ಬೆಳ್ತಂಗಡಿ ತಾ. ಸುಲ್ಕೇರಿ ಗ್ರಾಮದ ಮಾಳಿಗೆ-ಕದಿರಾಜೇಶ್ವರ ದೇವಸ್ಥಾನ ಸಂಪರ್ಕ ರಸ್ತೆ. | 2019-20 ಬಂಡವಾಳ ವೆಚ್ಚಗಳು | 25.00 | ಲೋಕೋಪಯೋಗಿ ಇಲಾಖೆ | 8.00 | ಕಾಮಗಾರಿ ಪೂರ್ಣಗೊಂಡಿದೆ |
| 2 | ಬೆಳ್ತಂಗಡಿ ತಾ. ಶಿಶಿಲ ಗ್ರಾಮದ ಓಟ್ಲ ಶ್ರೀ ಬ್ರಹ್ಮಬೈದರ್ಕಳ ಗರಡಿ ಸಂಪರ್ಕ ರಸ್ತೆ. | 2019-20 ಬಂಡವಾಳ ವೆಚ್ಚಗಳು | 25.00 | ಲೋಕೋಪಯೋಗಿ ಇಲಾಖೆ | 8.00 | ಕಾಮಗಾರಿ ಪೂರ್ಣಗೊಂಡಿದೆ |
| 3 | ಬೆಳ್ತಂಗಡಿ ತಾ. ಗರ್ಡಾಡಿ ಗ್ರಾಮದ ನಂದಿಬೆಟ್ಟದಿಂದ ಶ್ರೀ ನಂದಿಕೇಶ್ವರ ದೇವಸ್ಥಾನ ಸಂಪರ್ಕ ರಸ್ತೆ. | 2019-20 ಬಂಡವಾಳ ವೆಚ್ಚಗಳು | 25.00 | ಲೋಕೋಪಯೋಗಿ ಇಲಾಖೆ | 8.00 | ಕಾಮಗಾರಿ ಪೂರ್ಣಗೊಂಡಿದೆ |
| 4 | ಬೆಳ್ತಂಗಡಿ ತಾಲ್ಲೂಕಿನ ಮಲವಂತಿಕೆ ಗ್ರಾಮದ ಫಾಲ್ಸ್‌ನ್ನು ಪ್ರವಾಸೋದ್ಯಮ ಕ್ಷೇತ್ರವಾಗಿ ಗುರುತಿಸಿ, ಅಭಿವೃದ್ಧಿಪಡಿಸುವುದು. | 2019-20 ಬಂಡವಾಳ ವೆಚ್ಚಗಳು | 150.00 | ಕೆಆರ್ ಐಡಿಎಲ್ | 100.00 | ಕಾಮಗಾರಿ ಪ್ರಗತಿಯಲ್ಲಿದೆ |
| 5 | ಬೆಳ್ತಂಗಡಿ ತಾಲ್ಲೂಕಿನ ಉಜಿರೆ ಗ್ರಾಮದ ಸೂರ್ಯನಾರಾಯಣ ದೇವಸ್ಥಾನಕ್ಕೆ ಸಂಪರ್ಕ ರಸ್ತೆ ಅಭಿವೃದ್ಧಿಗೊಳಿಸುವ ಕಾಮಗಾರಿ | 2018-19 ಬಂಡವಾಳ ವೆಚ್ಚಗಳು | 50.00 | ಲೋಕೋಪಯೋಗಿ ಇಲಾಖೆ | 25.00 | ಕಾಮಗಾರಿ ಪೂರ್ಣಗೊಂಡಿದೆ |
| 6 | ಬೆಳ್ತಂಗಡಿ ತಾಲ್ಲೂಕಿನ ಶಿಶಿಲ ಗ್ರಾಮದ ಶಿಶಿಲೇಶ್ವರ ದೇವಸ್ಥಾನದ ಬಳಿ ಶೌಚಾಲಯ ನಿರ್ಮಾಣ. | 2018-19 ಬಂಡವಾಳ ವೆಚ್ಚಗಳು | 25.00 | ಲೋಕೋಪಯೋಗಿ ಇಲಾಖೆ | 25.00 | ಕಾಮಗಾರಿ ಪೂರ್ಣಗೊಂಡಿದೆ |
| 7 | ಬೆಳ್ತಂಗಡಿ ತಾಲ್ಲೂಕಿನ ಕೊಕ್ಕಡ ಗ್ರಾಮದ ಸೌತಡ್ಕ ಮಹಾಗಣಪತಿ ದೇವಸ್ಥಾನದ ಬಳಿ ಶೌಚಾಲಯ | 2018-19 ಬಂಡವಾಳ ವೆಚ್ಚಗಳು | 25.00 | ಲೋಕೋಪಯೋಗಿ ಇಲಾಖೆ | 25.00 | ಕಾಮಗಾರಿ ಪೂರ್ಣಗೊಂಡಿದೆ |
| 8 | ಬೆಳ್ತಂಗಡಿ ತಾಲ್ಲೂಕಿನ ಶ್ರೀ ಕ್ಷೇತ್ರ ಧರ್ಮಸ್ಥಳದ ಸ್ನಾನಘಟ್ಟ ಅಭಿವೃದ್ಧಿ ಕಾಮಗಾರಿ **(ಕೆಟಿವಿಜಿ)** | 2019-20 ಬಂಡವಾಳ ವೆಚ್ಚಗಳು | 464.52 | ಲೋಕೋಪಯೋಗಿ ಇಲಾಖೆ | 362.00 | ಕಾಮಗಾರಿ ಪೂರ್ಣಗೊಂಡಿದೆ |
| | **ಬೆಳ್ತಂಗಡಿ ತಾಲ್ಲೂಕಿನ ಒಟ್ಟು :** | | 789.52 | | 561.00 | |